ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕೋಲಾರ

Spl.C. Corruption 4/2020

ಫ್ರಾಸಾಃ 1 ಚಾಸಾಃ 1

ದಿನಾಂಕಃ 30-11-2021

ಸಾಕ್ಷಿ ಕ್ರಮವಾಗಿ ಪ್ರಮಾಣ ವಚನ ಮಾಡಿದನು

ಹೆಸರು :- ಮಲ್ಲಿಕಾರ್ಜುನ ರೆಡ್ಡಿ
ತಂದೆಯ ಹೆಸರು :- ಚಂಗಲರಾಯರೆಡ್ಡಿ
ವಯಸ್ಸು :- 40 ವರ್ಷಗಳು
ಉದ್ಯೋಗ :- ಸೂಕ್ಷ್ಮ ಕಲಾವಿದ
ವಾಸ ಸ್ಥಳ :- ತೊಪ್ಪನಹಳ್ಳಿ, ಬಂಗಾರಪೇಟೆ ತಾಲ್ಲೂಕು.

ಮುಖ್ಯ ವಿಚಾರಣೆಃ ಶ್ರೀ ಎನ್.ರಾಮಚಂದ್ರಯ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ

2008 ರಲ್ಲಿ ನಾನು ತೊಪ್ಪನಹಳ್ಳಿಯಲ್ಲಿ ಅಕ್ಷರ ಅಂತರಾಷ್ಟ್ರೀಯ ಶಾಲೆ ಅಂತ ಒಂದು ಶಾಲೆಯನ್ನ ಪ್ರಾರಂಭಿಸಿದೆ.

ಈ ಶಾಲೆಯನ್ನ ನಡೆಸಲು ಒಂದು ಟ್ರಸ್ಟನ್ನ ರಚಿಸಿಕೊಂಡೆವು. ಈ ಟ್ರಸ್ಟಿಗೆ ಅಕ್ಕೈಮ್ಮ ಎಂಬುವವರು ಅಧ್ಯಕ್ಷರು. ನನ್ನ ತಂದೆ ಚಂಗಲರಾಯ ರೆಡ್ಡಿ ಆ ಟ್ರಸ್ಟಿಗೆ ಕಾರ್ಯದರ್ಶಿಗಳು, ನಾನು ಸದರಿ ಟ್ರಸ್ಟಿನ ಸದಸ್ಯ

ನಮ್ಮ ಟ್ರಸ್ಟ್ ವತಿಯಿಂದ ಮೇಲ್ಕಂಡ ಶಾಲೆಯನ್ನ ಗ್ರಾಮೀಣ ಭಾಗದಲ್ಲಿ ನಡೆಸುತ್ತಾ ಬಂದಿದ್ದೇವೆ.

ದಿನಾಂಕಃ 04-06-2018 ರಂದು ಶಾಲೆಯ ನವೀಕರಣಕ್ಕಾಗಿ ನನ್ನ ತಂದೆ ಚಂಗಲರಾಯರೆಡ್ಡಿ ಕೆಜಿಎಫ್., ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಅರ್ಜಿ ಕೊಟ್ಟರು. ನಮ್ಮ ಶಾಲೆ ಕೆಜಿಎಫ್., ವ್ಯಾಪ್ತಿಗೆ ಬರುತ್ತದೆ. ಈ ಶಾಲೆಗೆ ಸಂಬಂಧಿಸಿದ ಎಲ್ಲಾ ಕೆಲಸಗಳನ್ನ ನೋಡಿಕೊಳ್ಳಲು ನನ್ನ ತಂದೆ ನನಗೆ ವಹಿಸಿದ್ದರು. ನನ್ನ ತಂದೆ ಕೊಟ್ಟಿರುವ ಅರ್ಜಿಯ ದೃಢೀಕೃತ ನಕಲು ಇದೇ ಆಗಿದೆ. ಈ ಅರ್ಜಿಯ ದೃಢೀಕೃತ ನಕಲನ್ನ ಅ.ನಿ-1 ಎಂದು ಗುರುತಿಸಲಾಯಿತು. (ಆರೋಪಿತನ ನ್ಯಾಯವಾದಿ ಈ ಅರ್ಜಿಯ ಮೂಲ ದಾಖಲೆ ಕಛೇರಿಯಲ್ಲಿ ಲಭ್ಯವಿರುವುದರಿಂದ ಆ ಮೂಲ ಅರ್ಜಿಯನ್ನೇ ಹಾಜರು ಪಡಿಸಬೇಕೇ ವಿನಃ ಅದರ ದೃಢೀಕೃತ ನಕಲನ್ನ ಪ್ರದರ್ಶಿಕೆಯಾಗಿ ಗುರುತಿಸಲು ಸಾಧ್ಯವಿಲ್ಲವೆಂದು ಆಕ್ಷೇಪಿಸುತ್ತಾರೆ. ತನಿಖಾಧಿಕಾರಿ ಈ ದಾಖಲೆಯನ್ನ ಮೂಲ ಅರ್ಜಿಯನ್ನು ಸುಬರ್ದು ಹೊಂದಿರುವ ಕಛೇರಿಯಿಂದಲೇ ದೃಢೀಕೃತ ನಕಲಾಗಿ ಪಡೆದಿದ್ದಾರೆ. ಈ ಮೂಲ ಅರ್ಜಿ ಸಾರ್ವಜನಿಕ ಕಛೇರಿಯಲ್ಲಿದ್ದು ಸದರಿ ಕಛೇರಿಯ ಅಧಿಕಾರಿ ತನಿಖಾಧಿಕಾರಿಗೆ ನೀಡಿರುತ್ತಾರೆ. ಆದ್ದರಿಂದ ಸಾರ್ವಜನಿಕ ಕಛೇರಿಯ ದಾಖಲೆಯ ದೃಢೀಕೃತ ನಕಲನ್ನ ಕ್ರಮವಾಗಿ ತನಿಖಾಧಿಕಾರಿ ಪಡೆದು ಹಾಜರು ಪಡಿಸಿರುವುದರಿಂದ ಮೇಲ್ಕಂಡ ಆಕ್ಷೇಪಣೆಯನ್ನ ತಳ್ಳಿ ಹಾಕಲಾಗಿದೆ. ಈ ಅರ್ಜಿಯ ದೃಢೀಕೃತ ನಕಲು ಪ್ರದರ್ಶಿಕೆಯಾಗಿ ಗುರುತಿಸಲು ಅರ್ಹವಾಗಿದೆ)

ದಿನಾಂಕಃ 30-10-2018 ರಂದು ನಾನು ಕೆಜಿಎಫ್., ಬಿಇಓ ಕಛೇರಿಗೆ ಮದ್ಯಾಹ್ನ 03-00 ಘಂಟೆಗೆ ಹೋಗಿದ್ದೆ. ಶಾಲೆಯ ನವೀಕರಣದ ವಿಚಾರಕ್ಕಾಗಿ ಹೋಗಿದ್ದೆ

ಬಿಇಓ ಕ್ಷೇತ್ರ ಶಿಕ್ಷಣಾಧಿಕಾರಿ ಸುರೇಶ್ ರವರನ್ನ ನಾನು ಭೇಟಿಯಾದೆ. ನಮ್ಮ ಶಾಲೆ ನವೀಕರಣ ಆಯಿತೇ ಎಂದು ನಾನು ಅವರಿಗೆ ಕೇಳಿದೆ. ದಾಖಲೆಗಳನ್ನ ಪೂರೈಸಿದ್ದೀರಾ ಅಂತ ಕೇಳಿದರು. ನಾನು ಎಲ್ಲಾ ದಾಖಲೆಗಳನ್ನ ಪೂರೈಸಿದ್ದೇನೆ ಅಂತ ಆರೋಪಿ ಸುರೇಶನಿಗೆ ಹೇಳಿದೆ. ಆರೋಪಿ ಶಾಲೆ ನವೀಕರಣಗೊಳ್ಳಬೇಕಾದರೆ ಸ್ವಲ್ಪ ಖರ್ಚಾಗುತ್ತದೆ ಅಂತ ಹೇಳಿದ. ಎಷ್ಟು ಆಗುತ್ತದೆ ಅಂತ ನಾನು ಕೇಳಿದೆ. ನಮ್ಮ ಶಾಲೆ ಗಡಿ ಭಾಗದಲ್ಲಿದ್ದು ಹಳ್ಳಿಯಲ್ಲಿದ್ದು ಯಾವುದೇ ಭ್ರಷ್ಟಾಚಾರ ಚಟುವಟಿಕೆಗೆ ಪ್ರೋತ್ಸಾಹ ಇರುವುದಿಲ್ಲ ಅಂತ ಹೇಳಿದೆ. ಸರ್ಕಾರಿ ಶಾಲೆಗೆ ಭೂಮಿಯನ್ನು ನಾವು ದಾನ ಮಾಡಿದ್ದೇವೆ. ಕಾನೂನಾತ್ಮಕವಾಗಿ ಕೊಡುವುದನ್ನ ಹೊರತುಪಡಿಸಿ ಬೇರೆ ಏನೂ ಕೊಡಲು ನಾವು ತಯಾರಿಲ್ಲ ಅಂತ ಹೇಳಿದೆ. ಕಛೇರಿಯಲ್ಲಿ ಖರ್ಚು ವೆಚ್ಚಗಳು ಇರುತ್ತವೆ, ಆದ್ದರಿಂದ ಲಂಚ ಕೊಡಲೇಬೇಕು ಅಂತ ಹೇಳಿದರು. ಶಾಲೆ ನವೀಕರಣಗೊಳ್ಳಬೇಕಾದರೆ ಕೊಡಲೇಬೇಕು ಅಂತ ಹೇಳಿದರು. ಎಷ್ಟು ಆಗುತ್ತದೆ ಅಂತ ಕೇಳಿದೆ. ನನಗೆ ಲಂಚ ಕೊಡಲು ಇಷ್ಟ ಇರಲಿಲ್ಲ. ಎರಡೂವರೆ ಆಗುತ್ತದೆ ಅಂತ ಕೈಬೆರಳುಗಳನ್ನ ಸನ್ನೆ ಮಾಡಿ ಹೇಳಿದರು. ಈಗ ಒಂದೂವರೆ ಕೊಡಿ ಅಂತ ಕೈಬೆರಳು ಸನ್ನೆ ಮಾಡಿ ಹೇಳಿದರು. ಕೆಲಸ ಮುಗಿದ ಮೇಲೆ ಒಂದು ಕೊಡಿ ಅಂತ ಕೈಬೆರಳು ಸನ್ನೆ ಮಾಡಿ ಹೇಳಿದರು. ಆಗ ನನ್ನ ಬಳಿ ರೂ.15,000/-ಗಳು ಇದ್ದವು. ಆ ಹಣವನ್ನ ಆರೋಪಿತನಿಗೆ ನಾನು ಕೊಟ್ಟೆ. ಉಳಿಕೆ ಹಣವನ್ನ ಕೆಲಸವಾದ ಮೇಲೆ ಕೊಡಬೇಕು ಅಂತ ಹೇಳಿದರು. ನಾನು ಈ ಆರೋಪಿತನ ಸಂಭಾಷಣೆಯನ್ನ ನನ್ನ ಮೊಬೈಲ್-ನಲ್ಲಿ ರೆಕಾರ್ಡ್ ಮಾಡಿಕೊಂಡೆ.

ದಿನಾಂಕಃ 02-11-2018 ರಂದು ಕೋಲಾರ ಎಸಿಬಿ, ಕಛೇರಿಗೆ ಮದ್ಯಾಹ್ನ 02-00 ಘಂಟೆಗೆ ಹೋದೆ. ಅಲ್ಲಿ ಡಿವೈಎಸ್‌ಪಿ ಪುರುಶೋತ್ತಮ್ ರವರಿಗೆ ಒಂದು ದೂರನ್ನು ಕೊಟ್ಟೆ. ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿದಾರನ ದೂರು ಸೀಲ್ ಮೂಲಕ ನ್ಯಾಯಾಲಯಕ್ಕೆ ಕಳುಹಿಸಿಕೊಡಲಾಗಿದೆ, ಆ ಸೀಲನ್ನ ತೆರವುಗೊಳಿಸುವಂತೆ ಕೋರುತ್ತಾರೆ. ಅನುಮತಿ ನೀಡಲಾಯಿತು. ಸೀಲಾದ ಲಕೋಟೆಯನ್ನ ತೆರವು ಮಾಡಲಾಯಿತು. ಈ ಸೀಲಾಗಿರುವ ಲಕೋಟೆಯನ್ನ ಅ.ನಿ-2 ಅಂತ, ಈ ಲಕೋಟೆಯೊಳಗಿದ್ದ ಪ್ರಥಮ ವರ್ತಮಾನ ವರದಿಯನ್ನ ಅ.ನಿ-3 ಅಂತ ಗುರುತಿಸಲಾಯಿತು ಮತ್ತು ಮಲ್ಲಿಕಾರ್ಜುನ ರೆಡ್ಡಿಯ ಪ್ರಥಮ ವರ್ತಮಾನ ವರದಿಯ ಹೇಳಿಕೆಯನ್ನ ಅ.ನಿ-4 ಅಂತ ಗುರುತಿಸಲಾಯಿತು. ಸಾಕ್ಷಿಗೆ ಅ.ನಿ-4 ನ್ನ ತೋರಿಸಲಾಯಿತು, ಸಾಕ್ಷಿ ಇದು ನಾನು ಕೊಟ್ಟ ದೂರಾಗಿದ್ದು, ಅದರೊಳಗಿರುವ ಸಹಿ ನನ್ನದೆಂದು ಗುರುತಿಸುತ್ತಾನೆ. ಸಾಕ್ಷಿ ತನ್ನದೆಂದು ಗುರುತಿಸಿದ ಸಹಿಯನ್ನ ಅ.ನಿ-4(ಎ) ಎಂದು ಗುರುತಿಸಲಾಯಿತು. ನನ್ನ ಮೊಬೈಲನ್ನೂ ಕೂಡ ಪುರುಶೋತ್ತಮ್ ರವರಿಗೆ ಕೊಟ್ಟೆ. ನನ್ನ ಮೊಬೈಲನ್ನ ಆನ್ ಮಾಡಿ ಸಂಗ್ರಹವಾಗಿದ್ದ ಆಡಿಯೋ ಸಂಭಾಷಣೆಯನ್ನ ಕೇಳಿಸಿಕೊಂಡರು. ಆ ಸಂಭಾಷಣೆಯಲ್ಲಿ ನನಗೆ ಆರೋಪಿ ಲಂಚ ಕೇಳಿರುವ ಬಗ್ಗೆ ಉಲ್ಲೇಖವಾಗಿತ್ತು.

ಎಸಿಬಿ, ಅಧಿಕಾರಿ ಪುರುಶೋತ್ತಮ್ ರವರು ಅಲ್ಲಿ ಹಾಜರಿದ್ದ ಪ್ರಕಾಶ್ ಎಂಬುವವರನ್ನ ಪರಿಚಯಿಸಿದರು.

ಪ್ರಕಾಶ್ ರವರು ರಾಮನಗರದ ಎಸಿಬಿ, ಇನ್ಸ್‌ಪೆಕ್ಟರ್ ಆಗಿದ್ದರು. ಪ್ರಕಾಶ್ ರವರಿಗೆ ನನ್ನ ದೂರಿನ ಮಾಹಿತಿಯನ್ನ ಕೊಟ್ಟರು. ಮದ್ಯಾಹ್ನ 02-40 ಘಂಟೆಗೆ ಇಬ್ಬರು ಪಂಚ ಸಾಕ್ಷಿದಾರರನ್ನ ಕರೆಯಿಸಿದರು. ಅವರು ಒಬ್ಬರು ಶ್ಯಾಮಲಾದೇವಿ ಮತ್ತು ಮತ್ತೊಬ್ಬರು ಶ್ರವಣ್ ಕುಮಾರ್ ಆಗಿದ್ದರು ಇವರಿಬ್ಬರೂ ಕೂಡ ಸರ್ಕಾರಿ ನೌಕರರು. ಅವರಿಗೂ ಕೂಡ ನನ್ನ ದೂರಿನ ವಿಚಾರವನ್ನ ತಿಳಿಸಿದರು. ಬಾಕಿ ಬೇಡಿಕೆ ಹಣವಾದ ರೂ.10,000/-ವನ್ನ ಖಚಿತ ಪಡಿಸಿಕೊಂಡರು. ಆ ರೂ.10,000/-ಗಳನ್ನ ತಂದಿದ್ದೆ, ಅದನ್ನ ಎಸಿಬಿ., ಪೊಲೀಸರಿಗೆ ಕೊಟ್ಟೆ. ರೂ.2,000/- ಮುಖಬೆಲೆಯ 5 ನೋಟುಗಳನ್ನ ಕೊಟ್ಟೆ. ಎಸಿಬಿ., ಪೊಲೀಸರು ಆ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನ ಲೇಪನ ಮಾಡಿದರು. ಆ ನೋಟುಗಳನ್ನ ಪಂಚರಾದ ಶ್ಯಾಮಲಾದೇವಿಯವರಿಗೆ ಎಣಿಸಲು ಕೊಟ್ಟರು. ಆ ನೋಟುಗಳ ಸಂಖ್ಯೆಗಳನ್ನ ಚೀಟಿಯಲ್ಲಿ ಎಸಿಬಿ.,ಯವರು ಬರೆದುಕೊಂಡರು. ಆ ರೀತಿ ಬರೆದುಕೊಂಡ ಚೀಟಿ ಇದೇ ಆಗಿದೆ. ಆ ಚೀಟಿಯನ್ನ ಅ.ನಿ-5 ಎಂದು ಗುರುತಿಸಲಾಯಿತು. ಶ್ಯಾಮಲಾದೇವಿಯವರು ನನ್ನ ಶರ್ಟಿನ ಜೇಬಿನಲ್ಲಿ ಏನೂ ಇಲ್ಲ ಅಂತ ನೋಡಿ ಖಚಿತ ಪಡಿಸಿಕೊಂಡರು. ಶ್ಯಾಮಲಾದೇವಿಯವರು ಆ ನೋಟುಗಳನ್ನ ನನ್ನ ಜೇಬಿನಲ್ಲಿಟ್ಟರು. ಈ ನೋಟುಗಳನ್ನ ಯಾವುದೇ ಕಾರಣಕ್ಕೆ ಬೇರೆ ಉಪಯೋಗಿಸ ಕೂಡದು ಅಂತ ನನಗೆ ಮಾಹಿತಿ ಕೊಟ್ಟರು. ಆರೋಪಿ ಲಂಚಕ್ಕೆ ಬೇಡಿಕೆ ಇಟ್ಟಾಗ ಮಾತ್ರ ಕೊಡಬೇಕು ಅಂತ ಹೇಳಿದರು. ಈ ಎಲ್ಲಾ ಪ್ರಕ್ರೀಯೇಗಳನ್ನ ಹಂತಹಂತವಾಗಿ ಫೋಟೋ ತೆಗೆದರು.

ಎಸಿಬಿ., ಸಿಬ್ಬಂದಿ ಮಂಜಪ್ಪನವರು ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನ ತಯಾರಿಸಿದರು. ಈ ದ್ರಾವಣದಲ್ಲಿ ಸ್ವಲ್ಪವನ್ನ ತೆಗೆದು ಒಂದು ಬಾಟಲಿಗೆ ಸ್ಯಾಂಪಲ್-ಗೆ ಅಂತ ಹಾಕಿದರು. ಸದರಿ ಬಾಟಲಿಗೆ ಮುಚ್ಚಳ ಹಾಕಿ, ಸೀಲ್ ಮಾಡಿದರು. ಉಳಿಕೆ ದ್ರಾವಣಕ್ಕೆ ಶ್ಯಾಮಲಾದೇವಿಯವರ ಕೈಬೆರಳುಗಳನ್ನ ಅದ್ದಿಸಿದರು. ಆ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಈ ದ್ರಾವಣನ್ನ ಒಂದು ಬಾಟಲಿಗೆ ಹಾಕಿ, ಮುಚ್ಚಳ ಮುಚ್ಚಿ ಸೀಲ್ ಮಾಡಿದರು. ಸ್ಯಾಂಪಲ್-ಗಾಗಿ ಪಡೆದ ದ್ರಾವಣದ ಬಾಟಲ್ ಇದೇ ಆಗಿದೆ. ಅದನ್ನ 1 ನೇ ಮುದ್ದೆಮಾಲು ಅಂತ, ಕೈ ಬೆರಳು ಅದ್ದಿದ ದ್ರಾವಣದ ಬಾಟಲ್ ಇದೇ ಆಗಿದ್ದು ಅದನ್ನ 2 ನೇ ಮುದ್ದೆಮಾಲು ಅಂತ ಗುರುತಿಸಲಾಯಿತು.

ಎಸಿಬಿ., ಯವರು ನನಗೆ ಒಂದು ಸೋನಿ ಕಂಪನಿಯ ವಾಯ್ಸ್ ರೆಕಾರ್ಡರನ್ನ ಕೊಟ್ಟರು. ಆ ರೆಕಾರ್ಡರನ್ನ ಯಾವ ರೀತಿ ಚಾಲನೆ ಮಾಡಬೇಕು ಎಂಬುದರ ಮಾಹಿತಿ ಕೊಟ್ಟರು. ನನ್ನ ಮೊಬೈಲ್-ನಲ್ಲಿದ್ದ ಧ್ವನಿ ಸಂಭಾಷಣೆಯನ್ನ ಲ್ಯಾಪ್-ಟಾಪ್ ಮೂಲಕ ಒಂದು ಸಿಡಿಗೆ ವರ್ಗಾಯಿಸಿದರು. ಆ ಸಿಡಿಯ ಮೇಲೆ ನನ್ನ ಸಹಿ ಪಡೆದರು. ಆ ಸಿಡಿಯನ್ನ ಒಂದು ಲಕೋಟೆಯಲ್ಲಿ ಹಾಕಿ ಸೀಲ್ ಮಾಡಿದರು. ಮಧ್ಯಾಹ್ನ 02-40 ರಿಂದ 04-30 ರವರೆಗೆ ಈ ಪ್ರಕ್ರೀಯೇಗಳು ಜರುಗಿತು. ಈ ಪ್ರಕ್ರೀಯೇಯನ್ನ ಬರೆದುಕೊಳ್ಳಲಾಯಿತು. ಆ ರೀತಿ ಬರೆದುಕೊಂಡ ದಾಖಲೆ ಇದೇ ಆಗಿದೆ. ಅದನ್ನ ಅ.ನಿ-6 ಅಂತ ಗುರುತಿಸಲಾಯಿತು. ಸಾಕ್ಷಿ ತನ್ನದೆಂದು ಗುರುತಿಸಿದ ಸಹಿಯನ್ನ ಅ.ನಿ-6(ಎ) ಎಂದು ಗುರುತಿಸಲಾಯಿತು.

ಆ ಸಮಯದಲ್ಲಿ ತೆಗೆದ ಫೋಟೋಗಳು ಇವುಗಳೇ ಆಗಿವೆ. ಈ ಫೋಟೋಗಳನ್ನ ಅ.ನಿ-7 ರಿಂದ 14 ಎಂದು ಗುರುತಿಸಲಾಯಿತು.

ಅದೇ ದಿನ ಪಂಚರು, ನಾನು, ಎಸಿಬಿ., ಅಧಿಕಾರಿಗಳು ವಾಹನದಲ್ಲಿ ಕೆಜಿಎಫ್-ಗೆ ಬಿಇಓ ಕಛೇರಿಗೆ ಹೋದೆವು. ಯಾರಿಗೂ ಅನುಮಾನ ಬರದ ರೀತಿಯಲ್ಲಿ ವಾಹನವನ್ನ ನಿಲ್ಲಿಸಿದರು. ಆ ವಾಹನದಿಂದ ಶ್ರವಣಕುಮಾರ ಮತ್ತು ನಾನು ಇಳಿದೆವು. ಶ್ರವಣ್ ಕುಮಾರ್ ರವರು ಒತ್ತಾಯಿಸಿದರೇ ಮಾತ್ರ ಹಣ ನೀಡಬೇಕು ಇಲ್ಲವಾದರೆ ನೀಡಕೂಡದು ಅಂತ ನನಗೆ ಎಚ್ಚರಿಕೆ ಕೊಟ್ಟರು. ಶ್ರವಣ್ ಕುಮಾರ್ ರವರು ನಾನು ನಿನ್ನನ್ನ ಹಿಂಬಾಲಿಸುತ್ತಿರುತ್ತೇನೆ ಯಾರಿಗೂ ಅನುಮಾನ ಬರದಂತೆ ಬಿಇಓ ಕಛೇರಿಗೆ ಹೋಗು ಅಂತ ಹೇಳಿದರು. ದುಡ್ಡು ಸ್ವೀಕಾರ ಮಾಡಿದರೆ ಬಲಗೈನಿಂದ ತಲೆಯನ್ನ ಮುಂದಿನಿಂದ ಹಿಂದಕ್ಕೆ ಸವರಿಕೊಂಡು ಸನ್ನೆ ಮಾಡು ಅಂತ ಹೇಳಿದರು. ನಾನು ಕಛೇರಿಯ ಒಳಗೆ ಹೋದೆ. ಬಿಇಓರವರು ಕಛೇರಿಯಲ್ಲಿರಲಿಲ್ಲ. ನನ್ನ ಮೊಬೈಲ್-ನಿಂದ ನಾನು ಅವರಿಗೆ ಕರೆ ಮಾಡಿದೆ. ರೈಲಿನಲ್ಲಿ ಬೆಂಗಳೂರಿಗೆ ಹೋಗುತ್ತಿದ್ದೇನೆ, ನಾಳೆ ಸಿಗುತ್ತೇನೆ ಅಂತ ಹೇಳಿದರು. ಅದಾದ ಮೇಲೆ ನಾವೆಲ್ಲ ವಾಹನದಲ್ಲಿ ಕೋಲಾರ ಎಸಿಬಿ., ಕಛೇರಿಗೆ ವಾಪಸ್ಸು ಬಂದೆವು.

ಎಸಿಬಿ., ಕಛೇರಿಯಲ್ಲಿ ಶ್ಯಾಮಲಾದೇವಿಯವರು ನನ್ನ ಜೇಬಿನಲ್ಲಿಟ್ಟಿದ್ದ ಹಣವನ್ನ ವಾಪಸ್ಸು ತೆಗೆದುಕೊಂಡರು.

ಸದರಿ ಹಣವನ್ನ ಒಂದು ಲಕೋಟೆಯೊಳಗಾಕಿ ಸೀಲ್ ಮಾಡಿದರು. ನನ್ನ ಬಳಿ ಇದ್ದ ಆಡಿಯೋ ರೆಕಾರ್ಡರನ್ನ ಕೂಡ ತೆಗೆದುಕೊಂಡರು. ಅದನ್ನೂ ಕೂಡ ಸೀಲ್ ಮಾಡಿದರು. ಈ ಎಲ್ಲಾ ಪ್ರಕ್ರೀಯೇಯನ್ನ ಬರವಣಿಗೆ ಮಾಡಿ ಸಹಿ ಪಡೆದರು.. ಆ ಬರವಣಿಗೆಯ ದಾಖಲೆ ಇದೇ ಆಗಿದೆ, ಅದನ್ನ ಅ.ನಿ-15 ಅಂತ ಗುರುತಿಸಲಾಯಿತು. ಸಾಕ್ಷಿ ತನ್ನದೆಂದು ಗುರುತಿಸಿದ ಸಹಿಯನ್ನ ಅ.ನಿ-15(ಎ) ಅಂತ ಗುರುತಿಸಲಾಯಿತು. ಈ ಬಗ್ಗೆ ಯಾರ ಬಳಿಯೂ ಚರ್ಚೆ ಮಾಡಬಾರದು ಅಂತ ಸೂಚನೆ ಕೊಟ್ಟರು. ಮಾರನೇಯ ದಿನ ಬರುವಂತೆ ತಿಳಿಸಿದರು.

ನಾನು ಮಾರನೇಯ ದಿನ ಬೆಳಗ್ಗೆ 09-00 ಘಂಟೆಗೆ ಬಂದೆ. ಪಂಚ ಸಾಕ್ಷಿದಾರರು ಬಂದರು. ಸೀಲ್ ಮಾಡಿದ್ದ ನೋಟನ್ನ ಹೊರತೆಗೆದರು. ನನ್ನ ಶರ್ಟ್ ಜೇಬಿನಲ್ಲಿ ಏನೂ ಇಲ್ಲ ಅಂತ ಶ್ಯಾಮಲಾದೇವಿಯವರು ಖಚಿತ ಮಾಡಿಕೊಂಡರು. ಆ ಐದೂ ನೋಟುಗಳನ್ನ ನನ್ನ ಜೇಬಿನಲ್ಲಿ ಶ್ಯಾಮಲಾದೇವಿಯವರು ಇಟ್ಟರು, ಸೋನಿ ಕಂಪನಿಯ ವಾಯ್ಸ್ ರೆಕಾರ್ಡರನ್ನ ಕೂಡ ನನಗೆ ಕೊಟ್ಟರು. ಶ್ರವಣ್ ಕುಮಾರ್ ರವರು ಆರೋಪಿ ಹಣವನ್ನ ಕೇಳಿದರೆ ಮಾತ್ರ ಕೊಡಬೇಕು ಅಂತ ನನಗೆ ಹೇಳಿದರು. ಪುನಃ ಪಂಚರು, ನಾನು, ಎಸಿಬಿ., ಅಧಿಕಾರಿ ಮತ್ತು ಸಿಬ್ಬಂದಿಗಳು ಸರ್ಕಾರಿ ಟಾಟಾ ಸುಮೋದದಲ್ಲಿ ಕೆಜಿಎಫ್ ಬಿಇಓ ಕಛೇರಿಗೆ ಬೆಳಗ್ಗೆ 11-30 ಘಂಟೆಗೆ ಹೋದೆವು. ಯಾರಿಗೂ ಅನುಮಾನ ಬರದಂತೆ ಸ್ವಲ್ಪ ದೂರದಲ್ಲಿ ವಾಹನವನ್ನ ನಿಲ್ಲಿಸಿದರು. ಆ ವಾಹನದಿಂದ ನಾನು ಮತ್ತು ಶ್ರವಣ್ ಕುಮಾರ್ ಇಳಿದೆವು ಉಳಿದವರು ಕಾರಿನಲ್ಲಿಯೇ ಇದ್ದರು.

ಒತ್ತಾಯ ಮಾಡಿದರೆ ಮಾತ್ರ ಕೊಡಬೇಕು ಇಲ್ಲದಿದ್ದರೆ ಕೊಡಬಾರದು ಹಾಗೂ ಹಣ ಸ್ವೀಕಾರ ಮಾಡಿದ ಮೇಲೆ ಬಲಗೈನಿಂದ ತಲೆಯನ್ನ ಮುಂದಿನಿಂದ ಹಿಂದಕ್ಕೆ ಸವರಿ ಸನ್ನೆ ಮಾಡಬೇಕು ಅಂತ ಮತ್ತೆ ನನಗೆ ಸೂಚನೆ ಕೊಟ್ಟರು. ವಾಯ್ಸ್ ರೆಕಾರ್ಡಿಂಗ್ ಚಾಲನೆಯನ್ನೂ ಕೂಡ ಪುನಃ ಹೇಳಿಕೊಟ್ಟರು. ಯಾರಿಗೆ ಹಣವನ್ನ ತೆಗೆದುಕೊಂಡು ಕೊಡುತ್ತಾರೆ ಎಲ್ಲವನ್ನ ಗಮನಿಸಿಕೊಳ್ಳಬೇಕು ಅಂತ ನನಗೆ ಹೇಳಿದರು.

ನಾನು ಮತ್ತು ಶ್ರವಣ್ ಕುಮಾರ್ ಕಛೇರಿಯ ಒಳಗೆ ಹೊರಟೆವು. ಶ್ರವಣ್ ಕುಮಾರ್ ನನ್ನನ್ನ ಹಿಂಬಾಲಿಸುತ್ತಿದ್ದರು. ನಾನು ಕಛೇರಿಯ ಒಳಗೆ ಹೋದಾಗ ಬಿಇಓ ಇರಲಿಲ್ಲ. ಶ್ರವಣ್ ಕುಮಾರ್ ಕಛೇರಿಯ ಹೊರಗೆ ಇದ್ದರು. ನಾನು ಬಿಇಓರವರಿಗೆ ಫೋನ್ ಮಾಡಿದೆ. ಯಾವುದೋ ಶಾಲೆ ಭೇಟಿ ಮಾಡಲು ಹೋಗಿದ್ದೇನೆ, 12-00 ಘಂಟೆಗೆ ಬರುತ್ತೇನೆ ಅಂತ ಹೇಳಿದರು. ಸ್ವಲ್ಪ ಸಮಯ ಅಲ್ಲಿಯೇ ಕಛೇರಿಯ ಬಳಿ ಇದ್ದೆವು. ಬಿಇಓರವರು 12-00 ಘಂಟೆಗೆ ಕಛೇರಿಗೆ ಬಂದರು. ಅವರು ಅವರ ಛೇಂಬರ್-ಗೆ ಹೋದರು, ನಾನು ಹಿಂಬಾಲಿಸಿಕೊಂಡು ಅವರ ಬಳಿ ಹೋದೆ. ಶ್ರವಣ್ ಕುಮಾರ್ ರವರು ಛೇಂಬರ್-ನ ಬಲಭಾಗದಲ್ಲಿದ್ದ ಕಿಟಕಿಯಿಂದ ನೋಡುತ್ತಿದ್ದರು. ನಾನು ಬಿಇಓರವರ ಬಳಿ ಹೋದೆ. ಆರೋಪಿ ಬಿಇಓರವರು ತೆಗೆದುಕೊಂಡು ಬಂದಿದ್ದೀಯಾ ಒಂದನ್ನ ಅಂತ ಕೇಳಿದರು. ನಾನು ತಂದಿದ್ದೇನೆ ಅಂತ ಹೇಳಿದೆ. ನನ್ನ ಜೇಬಿನಲ್ಲಿ ಇದ್ದ ರೂ.10,000/-ಗಳನ್ನ ಆರೋಪಿ ಸುರೇಶ್ ರವರ ಕೈಗೆ ಕೊಟ್ಟೆ. ಅವರು ತನ್ನ ಎರಡೂ ಕೈಗಳಿಂದ ನೋಟುಗಳನ್ನ ಎಣಿಸಿದರು.

ಅವರ ಮೇಜಿನ ಮೇಲಿದ್ದ ಲಗ್ನಪತ್ರಿಕೆಯ ಲಕೋಟೆಯ ಒಳಗೆ ಈ ಹಣವನ್ನ ಇಟ್ಟು ಅವರ ಮೇಜಿನ ಡ್ರಾಯರ್‌-ಗೆ ಲಕೋಟೆಯನ್ನ ಇಟ್ಟರು. ಆರೋಪಿ ನಿನ್ನ ಕೆಲಸ ಆಗುತ್ತದೆ, ಮಾಡಿಕೊಡುತ್ತೇನೆ ಹೋಗು ಅಂತ ಹೇಳಿದರು. ಆನಂತರ ನಾನು ಛೇಂಬರ್‌-ನಿಂದ ಹೊರಗೆ ಬಂದೆ. ಹೊರಗೆ ಬಂದು ನನ್ನ ಬಲಗೈನಿಂದ ತಲೆಯನ್ನ ಮುಂದಿನಿಂದ ಹಿಂದಕ್ಕೆ ಸವರಿ ಸನ್ನೆ ಮಾಡಿದೆ. ವಾಹನದಿಂದ ಎಸಿಬಿ, ಅಧಿಕಾರಿ ಮತ್ತು ಸಿಬ್ಬಂದಿಗಳು, ಪಂಚ ಸಾಕ್ಷಿದಾರರು ಎಲ್ಲರೂ ಬಂದರು. ಶ್ರವಣ್ ಕುಮಾರ್ ರವರು ಕಿಟಕಿಯಲ್ಲಿ ಮೇಲ್ಕಂಡ ವಿಧ್ಯಮಾನಗಳನ್ನ ಗಮನಿಸುತ್ತಿದ್ದರು. ಎಲ್ಲರೂ ಬಿಇಓ ಛೇಂಬರ್ ಬಳಿ ಬಂದರು. ಎಸಿಬಿ ಅಧಿಕಾರಿಗಳು ಆರೋಪಿ ಬಿಇಓಗೆ ನಾವು ಎಸಿಬಿ ರವರು ಅಂತ ಪರಿಚಯ ಮಾಡಿಕೊಂಡರು. ನಾನು ಎಸಿಬಿ ಅಧಿಕಾರಿಗಳಿಗೆ ಆರೋಪಿಗೆ ದುಡ್ಡು ಕೊಟ್ಟಿದ್ದೇನೆ ಅಂತ ಹೇಳಿದೆ. ಎಸಿಬಿ ಅಧಿಕಾರಿಗಳು ಆ ಹಣ ಎಲ್ಲಿದೆ ಅಂತ ಆರೋಪಿಗೆ ಕೇಳಿದರು. ಶ್ರವಣ್ ಕುಮಾರ್ ರವರು ಆರೋಪಿ ಡ್ರಾಯರ್‌ನಲ್ಲಿಟ್ಟಿದ್ದನ್ನ ನೋಡಿದ್ದರು. ಶ್ರವಣ್ ಕುಮಾರ್ ಎಸಿಬಿ ಅಧಿಕಾರಿಗಳಿಗೆ ಆರೋಪಿ ಹಣವನ್ನ ಡ್ರಾಯರ್ ನಲ್ಲಿಟ್ಟಿದ್ದಾನೆ ಎಂದು ತಿಳಿಸಿದರು. ಲಗ್ನಪತ್ರಿಕೆಯ ಲಕೋಟೆಯಲ್ಲಿ ಸುತ್ತಿ ಇಡಲಾಗಿದೆ ಅಂತ ತಿಳಿಸಿದ. ಸದರಿ ಲಕೋಟೆಯನ್ನ ಶ್ರವಣ್ ಕುಮಾರ್ ತೆಗೆದರು. ಅದನ್ನ ಎಸಿಬಿ ಅಧಿಕಾರಿಗಳಿಗೆ ಕೊಟ್ಟರು. ಸೋಡಿಯಂ ಕಾರ್ಬೋನೇಟ್ ಧ್ರಾವಣವನ್ನ ತಯಾರಿಸಿದರು. ಅದರಲ್ಲಿ ಸ್ವಲ್ಪ ತೆಗೆದು ಸ್ಯಾಂಪಲ್‌-ಗೆ ಅಂತ ಬಾಟಲ್‌-ಗೆ ಹಾಕಿ ಸೀಲ್ ಮಾಡಿದರು. ಆ ಬಾಟಲ್ ಇದೇ ಆಗಿದೆ. ಅದನ್ನ 3 ನೇ ಮುದ್ದೆಮಾಲು ಅಂತ ಗುರುತಿಸಲಾಯಿತು.

ಉಳಿಕೆ ದ್ರಾವಣದಲ್ಲಿ ಆರೋಪಿತನ ಬಲ ಮತ್ತು ಎಡ ಕೈಬೆರಳುಗಳನ್ನ ಪ್ರತ್ಯೇಕವಾಗಿ ಅದ್ದಿಸಿದರು. ಆ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಎರಡು ಬೌಲ್-ಗಳಲ್ಲಿದ್ದ ದ್ರಾವಣವನ್ನ ಬಾಟಲ್-ಗೆ ಹಾಕಿ ಸೀಲ್ ಮಾಡಿದರು. ಆ ಬಾಟಲ್-ಗಳು ಇವುಗಳೇ ಆಗಿವೆ. ಅವುಗಳನ್ನ 4 ಮತ್ತು 5 ನೇ ಮುದ್ದೆಮಾಲು ಎಂದು ಗುರುತಿಸಲಾಯಿತು. ಎಸಿಬಿ ಅಧಿಕಾರಿಗಳು ಡಿಡಿಪಿಐರವರನ್ನ ಅಲ್ಲಿಗೆ ಕರೆಯಿಸಿದರು. ಆರೋಪಿಯ ಛೇಂಬರ್-ನಲ್ಲಿ ನನ್ನನ್ನ ಕೂರಿಸಿದ್ದರು. ಎಸಿಬಿ ಅಧಿಕಾರಿಗಳು, ಪಂಚ ಸಾಕ್ಷಿದಾರರು ಕೂಡ ಅಲ್ಲಿಯೇ ಇದ್ದರು. ಡಿಡಿಪಿಐ ರವರ ಮೂಲಕ ನನ್ನ ಶಾಲೆಗೆ ಸಂಬಂಧಿಸಿದ ಕಡತವನ್ನ ತರಿಸಿಕೊಂಡರು. ಸದರಿ ಕಡತವನ್ನ ಪರೀಕ್ಷಿಸಿದಾಗ ಸದರಿ ಕಡತ ಆರೋಪಿ ಬಿಇಓ ರವರ ಸಹಿ ಆಗದೇ ಬಾಕಿ ಇತ್ತು. ಇದೆಲ್ಲವನ್ನ ಹಂತಹಂತವಾಗಿ ವರದಿ ಮಾಡಿಕೊಂಡು, ಫೋಟೋಗಳನ್ನ ತೆಗೆಸಿದರು. ಈ ಎಲ್ಲಾ ಪ್ರಕ್ರೀಯೇಗಳನ್ನ ಬರೆದುಕೊಂಡರು. ನಮ್ಮ ಶಾಲೆಗೆ ಸಂಬಂಧಿಸಿದ ಕಡತವನ್ನ ಜೆರಾಕ್ಸ್ ಮಾಡಿಕೊಂಡು ದೃಢೀಕರಿಸಿ ಪಡೆದುಕೊಂಡರು. ನಮ್ಮ ಶಾಲೆಗೆ ಸೇರಿದ ಕಡತದ ದೃಢೀಕೃತ ನಕಲುಗಳು ಇವೇ ಆಗಿವೆ. ಅಭಿಯೋಜಕರು ಹಾಜರು ಪಡಿಸಿರುವ ವ್ಯಾಲ್ಯುಂನಲ್ಲಿ ಪುಟ -124 ರಿಂದ ಪುಟ-194 ಎಂದು ಗುರುತಿಸಿರುವ ದಾಖಲೆಗಳನ್ನ ಸಾಕ್ಷಿಗೆ ತೋರಿಸಲಾಯಿತು. ಸಾಕ್ಷಿಯು ಇದೇ ದಾಖಲೆಗಳು ನಮ್ಮ ಶಾಲೆಗೆ ಸೇರಿದ ಕಡತದ ದೃಢೀಕೃತ ನಕಲುಗಳಾಗಿವೆ ಎಂದು ಗುರುತಿಸುತ್ತಾನೆ. ಈ ಎಲ್ಲಾ ದಾಖಲೆಗಳು ಅ.ನಿ-1 ಸೇರಿದಂತೆ ಒಟ್ಟಾರೆಯಾಗಿ ಅ.ನಿ-16 ಅಂತ ಗುರುತಿಸಲಾಯಿತು.

ಆರೋಪಿ ಸುರೇಶನನ್ನ ಸಮಜಾಯಿಷಿ ನೀಡಲು ಎಸಿಬಿ ಅಧಿಕಾರಿಗಳು ಕೇಳಿದರು. ಆರೋಪಿ ಸಮಜಾಯಿಷಿಯನ್ನ ಬರೆದುಕೊಟ್ಟ. ಅದು ಇದೇ ಆಗಿದೆ. ಅದನ್ನ ಅ.ನಿ-17 ಎಂದು ಗುರುತಿಸಲಾಯಿತು.

ಸೋನಿ ರೆಕಾರ್ಡರನ್ನ ಪ್ಲೇ ಮಾಡಿದಾಗ ಅದು ತಾಂತ್ರಿಕ ಕಾರಣದಿಂದ ಸಂಭಾಷಣೆ ರೆಕಾರ್ಡ್ ಆಗಿರಲಿಲ್ಲ. ಲಗ್ನಪತ್ರಿಕೆಯನ್ನು ಮತ್ತು ಹಣವನ್ನ ಅಮಾನತ್ತು ಮಾಡಿ ಸೀಲ್ ಮಾಡಿದರು. ಇದೆಲ್ಲವನ್ನ ಮಹಜರ್ ಮಾಡಿದರು. ಸದರಿ ಮಹಜರ್ ಇದೇ ಆಗಿದೆ. ಅದನ್ನ ಅ.ನಿ-18 ಅಂತ ಗುರುತಿಸಲಾಯಿತು. ಸಾಕ್ಷಿ ತನ್ನದೆಂದು ಗುರುತಿಸಿದ ಸಹಿಯನ್ನ ಅ.ನಿ-18(ಎ) ಎಂದು ಗುರುತಿಸಲಾಯಿತು. ಪಂಚ ಸಾಕ್ಷಿದಾರರಾದ ಶ್ಯಾಮಲಾದೇವಿ ನೋಟುಗಳ ಸಂಖ್ಯೆಗಳನ್ನ ಮೊದಲು ಬರೆದುಕೊಂಡಿದ್ದ ಸಂಖ್ಯೆಗಳಿಗೆ ತಾಳೆ ಮಾಡಿ, ತಾಳೆಯಾಗಿದೆ ಅಂತ ಖಚಿತ ಪಡಿಸಿದರು. ಈ ಬಗ್ಗೆ ಪಂಚನಾಮೆಯಲ್ಲಿ ಉಲ್ಲೇಖ ಮಾಡಿದರು. ಸೀಲಾಗಿದ್ದ ಲಕೋಟೆಯನ್ನ ಮುಕ್ತ ನ್ಯಾಯಾಲಯದಲ್ಲಿ ತೆರವು ಮಾಡಲಾಯಿತು. ಈ ಲಕೋಟೆಯನ್ನ 6 ನೇ ಮುದ್ದೆಮಾಲು ಅಂತ, ಈ ಲಕೋಟೆಯ ಒಳಗಿದ್ದ ಲಗ್ನಪತ್ರಿಕೆಯ ಲಕೋಟೆಯನ್ನ 7 ನೇ ಮುದ್ದೆಮಾಲು ಅಂತ ಗುರುತಿಸಲಾಯಿತು. ಮತ್ತೊಂದು ಸೀಲಾಗಿದ್ದ ಲಕೋಟೆಯನ್ನ ಮುಕ್ತ ನ್ಯಾಯಾಲಯದಲ್ಲಿ ತೆರವು ಮಾಡಲಾಯಿತು. ಸದರಿ ಲಕೋಟೆಯನ್ನ 8 ನೇ ಮುದ್ದೆಮಾಲು ಅಂತ, ಈ ಲಕೋಟೆಯ ಒಳಗಿರುವ ರೂ.2000/- ಮುಖಬೆಲೆಯ 5 ನೋಟುಗಳನ್ನ ಒಟ್ಟಾರೆಯಾಗಿ 9 ನೇ ಮುದ್ದೆಮಾಲು ಅಂತ ಗುರುತಿಸಲಾಯಿತು.

ಆರೋಪಿ ಬಿಇಓರವರನ್ನ ಎಸಿಬಿ ಅಧಿಕಾರಿಗಳು ವಶಕ್ಕೆ ಪಡೆದುಕೊಂಡರು. ಅಲ್ಲಿ ಹಂತಹಂತವಾಗಿ ತೆಗೆದ ಫೋಟೋಗಳು ಇವುಗಳೇ ಆಗಿವೆ ಈ ಫೋಟೋಗಳನ್ನ ಅ.ನಿ-19 ರಿಂದ ಅ.ನಿ-30 ಎಂದು ಗುರುತಿಸಲಾಯಿತು. ಇಂಜಿನೀಯರ್ ರವರನ್ನ ಕರೆಸಿ ಅಲ್ಲಿ ಎಲ್ಲವನ್ನ ಅಳತೆ ಮಾಡಿಸುತ್ತಿದ್ದರು. ಆನಂತರ ಎಲ್ಲರೂ ಎಸಿಬಿ ಕಛೇರಿಗೆ ಆರೋಪಿತನೊಂದಿಗೆ ವಾಪಸ್ಸು ಹೋದೆವು. ಆರೋಪಿ ಬಿಇಓ ಸುರೇಶ್ ನ್ಯಾಯಾಲಯದಲ್ಲಿರುವ ಆರೋಪಿಯೇ ಆಗಿದ್ದಾರೆ.

ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಮಹಮದ್ ಹನೀಫ್ ವಕೀಲರಿಂದಃ

ಮುಖ್ಯ ವಿಚಾರಣೆ ತುಂಬಾ ದೀರ್ಘವಾಗಿದ್ದು ಅನೇಕ ಸಂಗತಿಗಳು ಪ್ರಸ್ತಾಪವಾಗಿದ್ದು ಈ ಸಂಗತಿಗಳ ಮೇಲೆ ಆರೋಪಿತರಿಂದ ಮಾಹಿತಿಯನ್ನ ಪಡೆಯಬೇಕಾಗಿದ್ದು ಆದ್ದರಿಂದ ಪಾಟೀ ಸವಾಲನ್ನ ಮುಂದೂಡಲು ಕೋರುತ್ತಾರೆ. ಪಾಟೀ ಸವಾಲನ್ನ ಮುಂದೂಡಲಾಯಿತು.

(8 ಮತ್ತು 9 ಮುದ್ದೆಮಾಲುಗಳಾದ ಲಕೋಟೆ ಹಾಗೂ ನೋಟುಗಳನ್ನ ಖಜಾನೆಯಿಂದ ಭದ್ರತಾ ಪೆಟ್ಟಿಗೆ ಸ್ವೀಕರಿಸುವ ತನಕ ಈ ನ್ಯಾಯಾಲಯದ ಕ್ಯಾಷ್ ನಾಜರ್ ರವರಿಗೆ ಕ್ಯಾಷ್ ಚೆಸ್ಟ್‌ನಲ್ಲಿಡಲು ಸುಬರ್ದು ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

SD/-

(ಕೆ.ಆರ್.ನಾಗರಾಜ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ.**